ಘಾರಂಗಳು ಯಾವುವು; ಆದಾಯ, ನಷ್ಟ ಸಮವಾಗಿರುವ ಘಾರಂಗಳು ಯಾವುವು?

(ಇ) ನಷ್ಟದಲ್ಲಿರುವ ಘಾರಂಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

(ಈ) ಮೈಸೂರು ವಿಶ್ವವಿದಾಯನಿಲಯದ ರೇಷ್ಮೆ ಸಂಶೋಧನಾ ವಿಭಾಗದವರಿಗೆ ಈ ಘಾರಂಗಳಲ್ಲಿ ತರಬೇತಿ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ.ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು):

(ಅ) ಮೈಸೂರು ಜಿಲ್ಲೆಯಲ್ಲಿ 6 ರೇಷ್ಮೆ ಘಾರಂಗಳಿವೆ. ತಾಂಡವಪುರ, ಮೂಗೂರು, ನಂಜನಗೂಡು, ಧರ್ಮಾಪುರ, ಹೊರಳಹಳ್ಳಿ ಮತ್ತು ಕಗ್ಗುಂಡಿ.

ಚಾಮರಾಜನಗರ ಜಿಲ್ಲೆಯಲ್ಲಿ 7 ರೇಷ್ಮೆ ಘಾರಂಗಳಿವೆ. ಚಾಮರಾಜನಗರ, ಕುದೇರು, ಉಮ್ಮತ್ತೂರು, ಗಣಗನೂರು, ಮಂಗಲ, ಬಿ.ಆರ್.ಹಿಲ್ಸ್ ಮತ್ತು ಕೊಳ್ಳೇಗಾಲ.

(ಆ) ಎರಡು ಜಿಲ್ಲೆಗಳ ಎಲ್ಲಾ ಘಾರಂಗಳು ನಷ್ಟದಲ್ಲಿವೆ.

(ಇ) ಇಲ್ಲ.

(ಈ) ಮೈಸೂರು ವಿಶ್ವವಿದ್ಯಾಲಯದ ರೇಷ್ಮೆ ಸಂಶೋಧನಾ ವಿಭಾಗದವರಿಂದ ಈ ಬಗ್ಗೆ ಪ್ರಸ್ತಾವನೆ ಬಂದಿರುವುದಿಲ್ಲ. ಅಪೇಕ್ಷಿಸಿದಲ್ಲಿ ತರಬೇತಿ ನೀಡುವ ಬಗ್ಗೆ ಪರಿಗಣಿಸಲಾಗುವುದು.

ನಗರಾಭಿವೃದ್ಧಿ ಪ್ರಾಧಿಕಾರದ ನೌಕರರ ಕುರಿತು.

261(543)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಲವಾರು ನಗರಾಭಿವೃದ್ಧಿ ಪ್ರಾಧಿಕಾರಗಳ ನೌಕರರ ಒಂದೇ ಕಡೆ ಕಾರ್ಯನಿರತರಾಗಿದ್ದು ನಿವೃತ್ತಿಯವರೆಗೆ ಅಲ್ಲಿಯೇ ಕೆಲಸ ಮಾಡುವುದರಿಂದ ಸ್ವಹಿತಾಸಕ್ತಿ ಬೆಳೆಸಿಕೊಳ್ಳುವ ಅಪಾಯ ಇಲ್ಲವೇ;

ಆ) ಇದರಿಂದಾಗಿ ಕರ್ತವ್ಯ ನಿಷ್ಠೆಯಲ್ಲಿ ಕೊರತೆ ಸಾರ್ವಜನಿಕ ಕೆಲಸದಲ್ಲಿ ನಿರಾಸಕ್ತಿ ಮತ್ತು ಅಶಿಸ್ತು ಮೈಗೂಡುವುದಿಲ್ಲವೆ,

ಇ) ಈ ಲೋಪಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಈ ನೌಕರರುಗಳನ್ನು ಬೇರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೆ,

ಉ) ಹೌದಾದರೆ ಯಾವಾಗ ಜಾರಿಗೊಳಿಸಲಾಗುವುದು,

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

ಆ) ಅಂತಹ ಘಟನೆಗಳು ಇದುವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ, ಈ ಮತ್ತು ಉ) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1987ರಲ್ಲಿ ಅಭಿವೃದ್ಧಿ ಪ್ರಾಧಿಕಾರದ ನೌಕರರನ್ನು ಒಂದು ಅಭಿವೃದ್ಧಿ ಪ್ರಾಧಿಕಾರದಿಂದ ಇನ್ನೊಂದು ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಲು ಅವಕಾಶವಿದೆ. ಅಭಿವೃದ್ಧಿ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸೃಜಿಸುವ ವಿಷಯ ಪರಿಶೀಲನೆಯಲ್ಲಿದೆ. ಇದು ಅಂತಿಮವಾಗಿ ತೀರ್ಮಾನವಾದ ಕೂಡಲೇ ಒಂದು ಪ್ರಾಧಿಕಾರದಿಂದ ಇನ್ನೊಂದು ಪ್ರಾಧಿಕಾರಕ್ಕೆ ವರ್ಗಾಯಿಸುವ ವಿಷಯಕ್ಕೆ ಅಂತಿಮ ರೂಪ ಕೊಟ್ಟಂತಾಗುತ್ತದೆ.

ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುವುದರಿಂದ ಆಗುವ ತೊಂದರೆ.

262(545)

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಪೌರಾಡಳಿತ ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುರಸಭೆ, ನಗರಪಾಲಿಕೆ ಮುಂತಾದ ಸ್ಥಳದಲ್ಲಿ ಕಾರ್ಯನಿರ್ವಹಿಸುವ ನೌಕರರು ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುವುದರಿಂದ ಸ್ವಹಿತಾಸಕ್ತಿ ಬೆಳೆಸಿಕೊಳ್ಳುವ ಅಪಾಯ ಇಲ್ಲವೇ?

ಆ) ಇದರಿಂದಾಗಿ ಕೆಲಸದಲ್ಲಿ ನಿರಾಸಕ್ತಿ, ಅಶಿಸ್ತು ಮತ್ತು ನಿಷ್ಠೆ ಕೊರತೆ ಕಂಡುಬರುವುದಿಲ್ಲವೆ?